ವಿವಿಯ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ಪ್ರಾಯೋಗಿಕ ಪತ್ರಿಕೆ

ವಿನೌಕೆಯು weekly

ಸಂಪುಟ : 01 ಸಂಚಿಕೆ : 06 ದಿನಾಂಕ : ನವೆಂಬರ್ 04 – 11, 2016.

# ಪಠ್ಯ ಜೀವನಾಧಾರ; ಸಾಂಸ್ಕೃತಿಕ ಚಟುವಟಿಕೆಗಳಿಂದ ಜೀವನೋದ್ಧಾರ

**ಬಳ್ಳಾರಿ, ನ. 10:** ಬದುಕನ್ನು ಕಟ್ಟಿಕೊಳ್ಳುವಲ್ಲಿ ವೃತ್ತಿ ಶಿಕ್ಷಣ ಮುಖ್ಯವಾದರೆ, ಆ ಬದುಕನ್ನು ಸುಂದರ ಗೊಳಿಸುವಲ್ಲಿ ಕಲೆ, ಸಾಹಿತ್ಯ, ಸಂಗೀತಗಳಂತಹ ಸಾಂಸ್ಕೃತಿಕ ಚಟುವಟಿಕೆಗಳು ಪ್ರಮುಖ ಪಾತ್ರವಹಿಸುತ್ತವೆ ಎಂದು ಗುಲ್ಬರ್ಗಾ ವಿಶ್ವವಿದ್ಯಾಲಯದ ವಿಶ್ರಾಂತ ಪ್ರಾಧ್ಯಾಪಕ ಬಿ. ಸಿ. ಮಹಾಬಲೇಶ್ವರಪ್ಪ ಅಭಿಪ್ರಾಯಪಟ್ಟರು.

ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯದ ಹೊಸ ಸಭಾಂಗಣದಲ್ಲಿ ಆಯೋಜಿಸಿದ್ದ ಅಂತರ್ ವಿಭಾಗೀಯ ಸಾಂಸ್ಕೃತಿಕ ಸ್ಪರ್ಧೆಗಳ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಸಮಾಜ, ಪಾಲಕರು ಮತ್ತು ಜಾಗತೀಕರಣದ ಕಾರಣದಿಂದ ಇಂದು ಸಾಂಸ್ಕೃತಿಕ ಕಾರ್ಯಕ್ರಮಗಳ ಸಂಖ್ಯೆ ಕಡಿಮೆಯಾಗುತ್ತಿದೆ. ವಿಶ್ವವಿದ್ಯಾಲಯಗಳು ಇಂದು ವೃತ್ತಿಶಿಕ್ಷಣ ಕೊಡುತ್ತಿವೆಯೇ, ಹೊರತು ಜೀವನ ಶಿಕ್ಷಣ ನೀಡುವಲ್ಲಿ, ಜೀವನ ಉದ್ಧರಿಸುವಲ್ಲಿ ವಿಫಲವಾಗಿವೆ ಎಂದು ಕಳವಳ ವ್ಯಕ್ತಪಡಿಸಿದರು.

ನಮ್ಮದು ವ್ಯಕ್ತಿ ಸಂಸ್ಕೃತಿ ಅಲ್ಲ, ಜೀವನ ಸಂಸ್ಕೃತಿ. ವ್ಯಕ್ತಿ ಸಂಸ್ಕೃತಿಯಲ್ಲಿ ನಾನು ಮುಖ್ಯ, ಅದರೆ ಜೀವನ ಸಂಸ್ಕೃತಿಯಲ್ಲಿ ನಾವೊಂದು ಸಮೂಹ ಎಂಬ ಪ್ರಜ್ಞೆ ಇರುವಂತದ್ದು. ಇದು ಸಮಾನತೆ, ಸಹಕಾರ ಮತ್ತು ಸಹಬಾಳ್ವೆಗಳಿಗೆ ಪ್ರಾಮುಖ್ಯತೆ ನೀಡುತ್ತದೆ ಎಂದು ತಿಳಿಸಿದರು.

ಕಲೆಗೆ ಜಾತಿ–ಮತ, ಲಿಂಗ, ಪಂಗಡ ಎಂಬ ಬೇಧಭಾವವಿಲ್ಲ. ಅಸಮಾನತೆ ಮೀರಿದ ಸಹಬಾಳ್ವೆ ಕಲೆಯಿಂದ ಸಾಧ್ಯ, ಅದ್ದರಿಂದ ವಿದ್ಯಾರ್ಥಿಗಳು ಕಲೆಯಲ್ಲಿ ಹೆಚ್ಚೆಚ್ಚು ತೊಡಗಿಕೊಳ್ಳಬೇಕು. ಸಾಂಸ್ಕೃತಿಕ ಕಾರ್ಯಕ್ರಮಗಳು ಸ್ಪರ್ಧಾಳುಗಳಲ್ಲಿ ಉತ್ತಮ ವ್ಯಕ್ತಿತ್ವದ ಜೊತೆಗೆ ಮಾನಸಿಕ, ದೈಹಿಕ ಸಧೃಡತೆ ರೂಪಿಸುತ್ತವೆ ಎಂಬ ಕಿವಿಮತು ಹೇಳಿದರು.



**ವಿಶ್ರೀಕೃ ವಿವಿಯ ಯುವಜನೋತ್ಸವದ ಅಂಗವಾಗಿ ಆಯೋಜಿಸಿರುವ ಅಂತರ್ ವಿಭಾಗೀಯ ಸಾಂಸ್ಕೃತಿಕ ಸ್ಪರ್ಧೆಗಳ ಕಾರ್ಯಕ್ರಮವನ್ನು ಉದ್ಘಾಟಿಸುತ್ತಿರುವ ಗುಲ್ಬರ್ಗ ವಿವಿಯ ವಿಶ್ರಾಂತ ಪ್ರಾಧ್ಯಾಪಕ ಮಹಾಬಲ್ಲೇಶ್ವರಪ್ಪ. ಈ ಸಂದರ್ಭದಲ್ಲಿ ವಿವಿಯ ಸಿಂಡಿಕೇಟ್ ಸದಸ್ಯ ರಾಘವೇಂದ್ರ ಗುಂಡಿ, ಮೌಲ್ಯಮಾಪನ ಕುಲಸಚಿವ ಪ್ರೊ. ಎಸ್.ಎ ಪಾಟೀಲ್, ವಿದ್ಯಾರ್ಥಿ ಘಟಕದ ಕಲ್ಯಾಣಾಧಿಕಾರಿ ಪ್ರೋ.ಟಿ. ಸುರೇಶ್, ಡಾ. ಶಾಂತನಾಯ್ಕ ಹಾಜರಿದ್ದರು.**

ಈ ಸಂದರ್ಭದಲ್ಲಿ ಸಂಗೀತ ಕ್ಷೇತ್ರ ಸೇರಿದಂತೆ ಕರ್ನಾಟಕ ಮತ್ತು ಭಾರತೀಯ ಸಂಸ್ಕೃತಿಗೆ ಅಪಾರ ಕೊಡುಗೆ ನೀಡಿರುವ ಬಳ್ಳಾರಿಯ ಕಲಾವಿದರಾದ ಷಡಾಕ್ಷರಿ ಶಾಸ್ತ್ರಿ, ವೈ ಮಹಬಲೇಶಪ್ಪ, ಮುದೆನೊರಿ ಸಂಗಣ್ಣ, ಪಂಚಾಕ್ಷರಿ ಗವಯಿಗಳು, ರಘವಾ, ಜೋಳದರಾಶಿ ದೊಡ್ಡನಗೌಡ, ಸುಭದ್ರಮ್ಮ ಮನ್ಸೂರ್, ಸೇರಿದಂತೆ ಹಲವರನ್ನು ಸ್ಮರಿಸಿದರು.

**ಅಧ್ಯಕ್ಷರ ನುಡಿ:** ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಕುಲಸಚಿವ(ಮೌಲ್ಯಮಾಪನ)ರಾದ ಪ್ರೊ. ಎಸ್. ಎ. ಪಾಟೀಲ್ ಮಾತನಾಡಿ, ಪ್ರತಿಯೊಬ್ಬರಲ್ಲಿಯು ಒಂದು ಪ್ರತಿಭೆ ಇದ್ದೇ ಇರುತ್ತದೆ, ಅದನ್ನು ಗುರುತಿಸಲು ಸಾಂಸ್ಕೃತಿಕ ಕಾರ್ಯಕ್ರಮಗಳು ಸಹಕಾರಿಯಾಗಲಿವೆ. ನಿಮ್ಮಲಿರುವ ಪ್ರತಿಭೆಯನ್ನು, ನಿಮ್ಮ ವ್ಯಕ್ತಿತ್ವವನ್ನು ಈ ಕಾರ್ಯಕ್ರಮದಲ್ಲಿ ಪ್ರದರ್ಶಿಸಿ ವಿವಿಯ ಘನತೆ ಗೌರವವನ್ನು ಹೆಚ್ಚಿಸುವ ಮೂಲಕ ಶ್ರೇಷ್ಠವಿದ್ಯಾರ್ಥಿಯಾಗಿ ಬೆಳೆಯಬೇಕೆಂಬ ಸ್ಫೂರ್ತಿಯುತ ನುಡಿಗಳನ್ನಾಡಿದರು.

ಸಿಂಡಿಕೆಟ್ ಸಧಸ್ಯ ರಾಘವೇದ್ರ ಗುಂಡಿ ಮಾತನಾಡಿ ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗಳು ವಿದ್ಯಾರ್ಥಿ ಜೀವನದಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಈ ಚಟುವಟಿಕೆಗಳು ಹೆಚ್ಚು–ಹೆಚ್ಚು ವಿದ್ಯಾರ್ಥಿಗಳ ಬದುಕನ್ನು ಅರಳಿಸುತ್ತೆ ಎಂದರು. ಈ ಸಂದರ್ಭದಲ್ಲಿ ವಿದ್ಯಾರ್ಥಿ ಕಲ್ಯಾಣ ಅಧಿಕಾರಿ ಪ್ರೊ. ಟಿ. ಸುರೇಶ್, ಯುವಜನೋತ್ಸವದ ಸಂಯೋಜಕ ಡಾ. ಶಾಂತಾನಾಯ್ಕ ಉಪಸ್ಥಿತಿದ್ದರು. ಕನ್ನಡ ವಿಭಾಗದ ಡಾ. ಗಿರಿಗೌಡ ನಿರೂಪಿಸಿದರು, ಸಮಾಜಶಾಸ್ತ್ರ ವಿಭಾಗದ ಡಾ. ವಿರೇಂದ್ರಕುಮಾರ್ ವಂದಿಸಿದರು.

–ಪದ್ಮಾವತಿ

## ಪ್ರತಿಭೆಗಳ ಅನಾವರಣ, ನೋಡುಗರಿಗೆ ವಿಷಯ ಊರಣ

**ಬಳ್ಳಾರಿ, ನ. 10:** ಪ್ರತಿಭೆಗಳ ಅನಾವರಣಕ್ಕೆ ಉತ್ತಮ ವೇದಿಕೆಯಾಗಿ ರೂಪುಗೊಂಡಿರುವ ಯುವಜನೋತ್ಸವದಲ್ಲಿ ವಿಶ್ವವಿದ್ಯಾಲಯವು ನಾಲ್ಕು ವೇದಿಕೆಗಳನ್ನು ಸಿದ್ಧಪಡಿಸಿ, ಮೂರು ದಿನಗಳ ಕಾಲ ಅಂತರ್ ವಿಭಾಗೀಯ ಸಾಂಸ್ಕೃತಿಕ ಚಟುವಟಿಕೆಗಳನ್ನು ಹಮ್ಮಿಕೊಂಡಿದೆ.



**ಹೊಸ ಸಭಾಂಗಣದ ವೇದಿಕೆಯಲ್ಲಿ ಮಿಮಿಕ್ರಿ ಪ್ರಸ್ತುತಪಡಿಸುತ್ತಿರುವ ಸ್ಪರ್ಧಾಳು ನಾಗಭೂಷಣ್.**

ಹೊಸ ಸಭಾಂಗಣದ ವೇದಿಕೆಯಲ್ಲಿ ಗುರುವಾರ ಮಿಮಿಕ್ರಿ, ಮೂಕಾಭಿನಯ ಮತ್ತು ಪ್ರಹಸನ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿತ್ತು. ಮಿಮಿಕ್ರಿ ಸ್ಪರ್ಧೆಯು ಐದು ಮಿಷಗಳ ಕಾಲಾವಕಾಶವನ್ನು ಹೊಂದಿದ್ದು, ಪ್ರಾಣಿಗಳು, ಪಕ್ಷಿಗಳು, ಹರಿಕಥೆಕಾರರು, ರಂಗಭೂಮಿ ಕಲಾವಿಧರು, ರಾಜಕೀಯ ವ್ಯಕ್ತಿಗಳು, ನ್ಯೂಸ್ ಚಾನೆಲ್ಸ್, ವಾಹನಗಳ ಶಬ್ಧ ಮತ್ತು ಕನ್ನಡ ಚಲನಚಿತ್ರ ರಂಗದ ನಾಯಕ ನಟ ಮತ್ತು ಖಳನಟರ ಧ್ವನಿಯನ್ನು ಅನುಕರಿಸಿದರು. ಕೆಲವು ವಿದ್ಯಾರ್ಥಿಗಳು ಮಿಮಿಕ್ರಿ ಮಾಡುವ ವೇದಿಕೆಯಲ್ಲಿ ಚಿತ್ರಗೀತೆಗಳಿಗೆ ನೃತ್ಯ ಪ್ರದರ್ಶಿಸಿ ತೀರ್ಪುಗಾರರ ಕೆಂಗಣ್ಣಿಗೆ ಗುರಿಯಾದರು.

ಮಧ್ಯಾಹ್ನ ಮೂಕಾಭಿನಯ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು, ಸ್ಪರ್ಧೆಯಲ್ಲಿ ಕೊಪ್ಪಳ ಸ್ನಾತಕೋತ್ತರ ಕೇಂದ್ರದ ಜಿ.ಎಸ್. ರೋಹಿತ್ ಕುಮಾರ್ ತಂಡ, ನಂದಿಹಳ್ಳಿ ಸ್ನಾತಕೋತ್ತರ ಕೇಂದ್ರದ ಕಿರಣ್ ತಂಡ, ಬಳ್ಳಾರಿಯ ಪಂಪಾನಾಯ್ಕ್ ಹಾಗೂ ಮಂಜುನಾಥ ತಂಡಗಳು ಭಾಗವಹಿಸಿದ್ದವು.

ಈ ಕಾರ್ಯಕ್ರಮದಲ್ಲಿ ಪ್ರಸ್ತುತ ಮಹಿಳೆಯರ ಮೇಲಾಗುತ್ತಿರುವ ದೌರ್ಜನ್ಯಗಳು, ಮೊಬೈಲ್‌ಗಳ ಗುಂಗಿನಲ್ಲಿ ವ್ಯಕ್ತಿ ತನ್ನ ಕೆಲಸಗಳನ್ನು ಮರೆಯುವ ಬಗೆ, ಹೆಲ್ಮೇಟ್ ಧರಿಸದೇ ಪ್ರಯಾಣಿಸಿದರೆ ಎಂತಹ ಅಪಘಾತಗಳು ಕಾದಿರುತ್ತವೆ ಮತ್ತು ಮನುಷ್ಯನ ಅವಿವೇಕ, ಅಜ್ಞಾನದಿಂದ ನೀರು ಹೇಗೆ ಪೋಲಾಗುತ್ತಿದೆ ಎನ್ನುವ ವಿಷಯಗಳ ಬಗ್ಗೆ ವಿದ್ಯಾರ್ಥಿಗಳು ಮೂಕಾಭಿನಯ ಚತುರತೆ ಮೆರೆದರು.

ಸಂಜೆ ನಡೆದ ಪ್ರಹಸನ ಸ್ಪರ್ಧೆಯಲ್ಲಿ, ಒಟ್ಟು 13 ತಂಡಗಳು ಭಾಗಿಯಾಗಿದ್ದವು. ವಿದ್ಯಾರ್ಥಿಗಳು ಬರಗಾಲ, ಇಂಟರ್‌ನೆಟ್ ದುರ್ಬಳಕೆ, ಪೋಲಿಯೋ ಲಸಿಕೆ ಹಾಕಿಸದಿದ್ದರೆ ಉಂಟಾಗುವ ಸಮಸ್ಯೆಗಳು ಹಾಗೂ ವಿದೇಶಗಳಿಗೆ ಹಾರುವ ಭರದಲ್ಲಿ ಮತು ಹೆಂಡತಿಯ ವ್ಯಾಮೋಹದಲ್ಲಿ ತಾಯಿಯನ್ನು ಮಗ ವೃದ್ಧಾಶ್ರಮಕ್ಕೆ ಕಳಿಸುವ ಇದೇ ನನ್ನ ಮನೆ ಸೇರಿದಂತೆ ಬೇರೆ–ಬೇರೆ ಥೀಮ್‌ಗಳ ಪ್ರಹಸನಗಳನ್ನು ಪ್ರಸ್ತುತ ಪಡಿಸಿದರು.

ಬಳ್ಳಾರಿಯ ನಾಟಕ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಶಿವಶಂಕರ ನಾಯ್ಡು, ಮಯೂರ ಕಲಾ ಸಂಘದ ಕಾರ್ಯದರ್ಶಿ ಮತ್ತು ಕಲಾವಿಧ ಬಿ. ಗಂಗಣ್ಣ, ಮಯೂರ ಕಲಾ ಸಂಘದ ನಿರ್ದೇಶಕ ಶಿವೇಶ್ವರ ಗೌಡ ಕಲ್ಲುಕಂಬ ತೀರ್ಪುಗಾರರಾಗಿ ಆಗಮಿಸಿದ್ದರು.

–ಲತಾ

## ಕುಂಚದಲ್ಲಿ ಅರಳಿದ ಗಾಂಧೀ ಕನಸು

**ಬಳ್ಳಾರಿ, ನ. 10:** ಪರೀಕ್ಷಾಂಗ ವಿಭಾಗ ಕಟ್ಟಡದ ಕೆಳಮಹಡಿಯಲ್ಲಿನ ನಾಲ್ಕನೇ ವೇದಿಕೆಯಲ್ಲಿ ಚಿತ್ರಕಲೆ, ವ್ಯಂಗ್ಯಚಿತ್ರ ಮತ್ತು ಛಾಯಾಚಿತ್ರ ಸ್ಫರ್ಧೆಗಳನ್ನು ಆಯೋಜಿಸಲಾಗಿತ್ತು. ಮೊದಲನೆಯದಾಗಿ ಚಿತ್ರಕಲೆ ಸ್ಫರ್ದೆಯಲ್ಲಿ ವಿವಿಯ ಮುಖ್ಯವರಣದ 4 ವಿದ್ಯಾರ್ಥಿಗಳು ಸೇರಿದಂತೆ ಒಟ್ಟು 8 ಸ್ಪರ್ಧಾಳುಗಳು ಭಾಗವಹಿಸಿದ್ದರು.

ಸಾಮಾನ್ಯವಾಗಿ ಎಲ್ಲಾ ವಿದ್ಯಾರ್ಥಿಗಳು ನಸರ್ಗ ಮತ್ತು ಹಳ್ಳಿಗಳ ವಿಷಯಗಳನ್ನು ಆಯ್ಕೆ ಮಾಡಿಕೊಂಡರೆ ಒಬ್ಬ ವಿದ್ಯಾರ್ಥಿ ಮಾತ್ರ ಗಾಂಧೀಜಿ ಕನಸಾಗಿರುವ ಸ್ವಚ್ಛ ಭಾರತವನ್ನು ಆಯ್ದುಕೊಂಡಿದ್ದು ವಿಶೇಷವಾಗಿತ್ತು. ಪ್ರಸಕ್ತ ಸಮಸ್ಯೆಗಳಾದ ನಿರುದ್ಯೋಗ, ಬಡತನ, ಪರಿಸರ ಮಾಲಿನ್ಯವನ್ನು ಸೇರಿದಂತೆ ಮುಂತಾದ ವಿಷಯಗಳನ್ನು ಸ್ವಚ್ಛ ಭಾರತದ ಹಿನ್ನಲೆಯಲ್ಲಿ ಮೂಡಿಸಿದ್ದರು.

ವ್ಯಂಗ್ಯ ಚಿತ್ರ ವಿಭಾಗದಲ್ಲಿ ತಮ್ಮ ಚಿತ್ರಗಳಲ್ಲಿನ ಸಂದೇಶದ ಮೂಲಕ ವಿಶ್ವವಿದ್ಯಾಲಯದ ಮುಖ್ಯಆವರಣದ 4 ವಿದ್ಯಾರ್ಥಿಗಳು ತಮ್ಮ ಕಲಾ ನೈಪುಣ್ಯತೆಯನ್ನು ಮೆರೆದಿದ್ದದು ಕಂಡುಬಂದಿತು. 'ಕಾಳಧನಹರ ವಿರುದ್ಧ ಮೋದಿ ಯುದ್ದ' ಎಂಬ ವಿಷಯದ ಮೇಲಿನ ಸೃಜನಶೀಲ ವ್ಯಂಗ್ಯಚಿತ್ರಗಳು ನೋಡುಗರ ಗಮನ ಸೆಳೆದಿದ್ದು ಅಲ್ಲದೆ ಕಪ್ಪುಹಣ ಹೊಂದಿದವರನ್ನು ಗೇಲಿ ಮಾಡಿದವು. ಈ ಸಂದರ್ಭದಲ್ಲಿ ತೀರ್ಪುಗಾರರಾಗಿ ಆರ್. ಸಿ. ಜಾಧವ್ ಹಾಜರಿದ್ದು ಸ್ಪರ್ಧಾಳುಗಳ ವ್ಯಂಗ್ಯಚಿತ್ರದ ವಿಷಯಮಂಡನೆ ಕಲೆಯನ್ನು ಓರೆಗೆ ಹಚ್ಚಿದರು.

–ಗುರುಬಸವರಾಜ್ ಉಳ್ಳಾಗಡ್ಡಿ









**ಯುವಜನೋತ್ಸವದಲ್ಲಿ ಕಂಡು ಬಂದ ಕೆಲವು ದೃಶ್ಯಗಳು (ಎಡಭಾಗದಿಂದ)– 1. ಸರತಿ ಸಾಲಿನಲ್ಲಿ ನಿತು ಮಧ್ಯಾಹ್ನದ ಭೋಜನವನ್ನು ಸವಿಯಲು ಕಾಯುತ್ತಿರುವ ಸ್ಪರ್ಧಾಳುಗಳು. 2. ಪರೀಕ್ಷಾಂಗ ಕಟ್ಟಡದಲ್ಲಿ ಆಯೋಜಿಸಿದ್ದ ಚಿತ್ರಕಲೆ ಸ್ಪರ್ಧೆಯಲ್ಲಿ ಭಾಗವಹಿಸಿರುವ ಚಿತ್ರಕಲಾವಿದರು. 3. ಹೊಸ ಸಭಾಂಗಣದ ವೇದಿಕೆಯಲ್ಲಿ ಪ್ರಹಸನ ಪ್ರಸ್ತುತ ಪಡಿಸುತ್ತಿರುವ ವಿದ್ಯಾರ್ಥಿ. 4. ಏಡಿವ್ ಕಟ್ಟಡದ ಎರಡನೇ ವೇದಿಕೆಯಲ್ಲಿ ದೀಪಗಳೊಂದಿಗೆ ಹಚ್ಚೆವು ಕನ್ನಡದ ದೀಪ ಎಂಬ ಸಮೂಹ ಗಾಯನ ಹಾಡಿದ ಸ್ಪರ್ಧಾಳುಗಳ ಒಂದು ನೋಟ**

**ವಿದ್ಯಾರ್ಥಿ ಸಂಪಾದಕರು:** ಪದ್ಮಾವತಿ, ಲತಾ ವಿ, ಗುರುಬಸವರಾಜ್ ಉಳ್ಳಾಗಡ್ಡಿ. **ಮಾರ್ಗದರ್ಶಕರು :** ವಿನಯ್ ಜಿ. ಪಿ.